ಸಾಲಿಗ್ರಾಮದ ಪರಂಪಳ್ಳಿ ಸೇತುವೆಯ ಅಪೂರ್ಣ ಕೆಲಸ

1119 (1806) ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ಸಾಲಿಗ್ರಾಮ ಪುರಸಭೆಯ ಪಾರಂಪಳ್ಳಿ ಸೇತುವೆ ಪೂರ್ಣವಾಗಿರುವುದು ನಿಜವೆ: ಹಾಗಿದ್ದಲ್ಲಿ ಯಾವಾಗ ಪೂರ್ಣಗೊಂಡಿರುತ್ತದೆ.

ಆ) ಈ ಸೇತುವೆ ಸಾರ್ವಜನಿಕ ಸಂಚಾರಕ್ಕೆ ಇನ್ನು ಲಭ್ಯವಾಗದೇ ಇರುವುದು ನಿಜವಲ್ಲವೇ: ಹಾಗಿದ್ದಲ್ಲಿ ಯಾವ ಕಾರಣಗಳಿಂದ ಲಭ್ಯವಾಗಿಲ್ಲ. ತಿಳಿಸುವುದು:

ಇ) ಈ ಸೇತುವೆಯ ಎರಡು ಕಡೆಗಳ ಕೂಡು ರಸ್ತೆ ಯಾವಾಗ ಪೂರ್ಣವಾಗಬಹುದು?

ಶ್ರೀ ಜಿ.ಹೆಚ್. ಅಶ್ವತ್ಥ್‌ರೆಡ್ಡಿ (ಲೋಕೋಪಯೋಗಿ ಸಚಿವರು) :

ಅ) ಪಾರಂಪಳ್ಳಿ ಸೇತುವೆ ಕಾಮಗಾರಿ ಭಾಗ 1991 ಮೇ ತಿಂಗಳಲ್ಲಿ ಪೂರ್ಣಗೊಂಡಿದ್ದು. ಛಾವಣಿಗೆ ಸಿಮೆಂಟ್ ಕಾಂಕ್ರೀಟ್ ರಕ್ಷಣಾತ್ಮಕ ಪದರವನ್ನು (ವೆರಿಂಗ್ ಕೋಟ್) ಹಾಕುವ ಕೆಲಸ ಬಾಕಿ ಇದೆ. ಮತ್ತು ಕೂಡು ರಸ್ತೆ ಬಾಕಿ ಇರುತ್ತದೆ.

ಆ) ನಿಜ. ಕೂಡು ರಸ್ತೆ ಪ್ರಗತಿಯಲ್ಲಿರುವುದರಿಂದ ಹಾಗೂ ಸೇತುವೆಯ ಮೇಲೆ ರಕ್ಷಣಾತ್ಮಕ ಪದರ ಹಾಕುವುದು ಬಾಕಿ ಇರುವುದರಿಂದ ಸಂಚಾರಕ್ಕೆ ಲಭ್ಯವಾಗಿಲ್ಲ.

ಇ) ಈ ಕಾಮಗಾರಿಯನ್ನು ಪೂರ್ತಿ ಮಾಡಲು 3.22 ಲಕ್ಷ ರೂ.ಗಳ ಹೆಚ್ಚಿನ ಅನುದಾನ ಬೇಕಾಗಿದೆ. ಈ ಸಾಲಿನಲ್ಲಿ 2 ಲಕ್ಷ ರೂ.ಗಳ ಅನುದಾನ ಇದೆ. ಇನ್ನು ಬೇಕಾಗಿರುವ ಹಣವನ್ನು ಅನುದಾನದ ಲಭ್ಯತೆಯ ಮೇಲೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹರಿಹರ ತಾಲೋಕು ಪಾಳ್ಯ ಪಂಚಾಯತ್ ಸಮಿತಿಯ ಅಧೀನದಲ್ಲಿರುವ ಜಮೀನು

1121 (1893) ಶ್ರೀ ವೈ. ನಾಗಪ್ಪ (ಹರಿಹರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿತ್ರದುರ್ಗ ಜಿಲ್ಲೆಯ ಹರಿಹರ ತಾಲ್ಲೂಕಿನ ಪಾಳ್ಯ ಗ್ರಾಮದಲ್ಲಿರುವ ತಾಲ್ಲೂಕು ಪಂ. ಸಮಿತಿಯ ಅಧೀನದಲ್ಲಿ ಜಮೀನು ಇದೆಯೇ? ಇದ್ದರೆ ಅದರ ವಿಸ್ತೀರ್ಣತೆ ಎಷ್ಟು ಈ ಜಮೀನನ್ನು ಯಾವ ರೀತಿ ಅಭಿವೃದ್ಧಿಗೊಳಿಸಲಾಗಿದೆ ಮತ್ತು ಯಾವ ಇಲಾಖೆಯ ಉಸ್ತುವಾರಿಗೆ ವಹಿಸಲಾಗಿದೆ.

ಆ) ಸದರೀ ಜಮೀನನ್ನು ಖಾಸಗಿಯವರಿಗೆ ಬೋಗ್ಯಕ್ಕೆ ಜಿಲ್ಲಾಪರಿಷತ್ ಮುಖೇನ ನೀಡಿರುವುದು ನಿಜವಲ್ಲವೇ ಎಷ್ಟು ಹಣಕ್ಕೆ ಮತ್ತು ಎಷ್ಟು ವರ್ಷಕ್ಕೆ. ಬೋಗ್ಯಕ್ಕೆ ಒಪ್ಪಂದಕ್ಕೆ ಕೊಡಲಾಗಿದೆ. ಬೋಗ್ಯದ ಬಿಟ್ಟುಕೊಡಲು ಜಿಲ್ಲಾಪರಿಷತ್ ಕೈಗೊಂಡ ನಿರ್ಣಯಕ್ಕೆ ಕಾರಣಗಳೇನು?